**ಸಾಕ್ಷಿಯನ್ನು ದಿಃ07.08.2019 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ.ಕೆಎಂವಿ ವಕೀಲರಿಂದಃ**

ಈಗ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ನಾನು ಗುರಪ್ಪ ಮತ್ತು ಇತರರಿಗೆ ದಿಃ 09-07-1997 ಬರದುಕೊಟ್ಟಂತಹ ಕ್ರಯ ಪತ್ರದ ಅಸಲು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದು ಅದನ್ನು ನಿಪಿ 1 ಎಂದು ಹಾಗೂ ನಾನು ವೆಂಕಟಪ್ಪ ಮತ್ತು ವೆಂಕಟರಾಮಪ್ಪರವರಿಗೆ ಬರೆದುಕೊಟ್ಟ ಕ್ರಯ ಪತ್ರ ದಿಃ 03.07.2000ದ ಅಸಲು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದು ಅದನ್ನು ನಿಪಿ 2 ಎಂದು , ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಎರಡು ಎಂಆರ್‌ನ್ನು ಹಾಜರು ಮಾಡಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ಮತ್ತು 4 ಎಂದು, ಸರ್ವೆ ನಂ. 86ಕ್ಕೆ ಸಂಬಂಧಪಟ್ಟಂತೆ ಮೂರು ಪಹಣಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕ್ರಮವಾಗಿ ನಿಪಿ 5 ರಿಂದ 7 ಎಂದು, ನಾನು ಪ್ರತಿವಾದಿಯರಿಗೆ ಮಾಡಿಕೊಟ್ಟ ನೊಂದಾಯಿತ ವಿಲ್‌ನ ಒಂದು ಅಸಲು ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ 8 ಎಂದು, ಅದೇ ರೀತಿ ಸದರಿ ವಿಲ್‌ನ್ನು ನಾನು ರದ್ದುಗೊಳಿಸಿದ ಬಗ್ಗೆ ನೊಂದಾಯಿತ ವಿಲ್‌ನ ರದ್ದಿಯಾಯಿತಿ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ 9 ಎಂದು , ನನ್ನ ಮತುತ ನನ್ನ ಮಕ್ಕಳ ಮದ್ಯೆ ಆದ ನೊಂದಾಯಿತ ವಿಭಾಗ ಪತ್ರದ ಅಸಲು ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ 10 ಎಂದು, ನಿಪಿ 10 ಇಪ್ಪತ್ತೇಳು ಪುಟಗಳನ್ನು ಒಳಗೊಂಡಿರುತ್ತದೆ, ಅಸಲು ದಾವಾ ಸಂ. 07/11ರ ತೀರ್ಪಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ 11 ಎಂದು, ಅದಕ್ಕೆ ಸಂಬಂಧಪಟ್ಟ ಡಿಕ್ರಿಯ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ 12 ಎಂದು, ಪ್ರತಿವಾದಿಯರು ನನಗೆ ತೊಂದರೆ ಕೊಟ್ಟ ಬಗೆಗ ಸಂಬಂಧಪಟ್ಟ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಅದಕ್ಕೆ ಸಂಬಂಧಪಟ್ಟ ಠಾಣೆಯವರು ಒಂದು ಹಿಂಬರಹ ಮತ್ತು ಸ್ವೀಕೃತಿಯನ್ನು ನೀಡಿದ್ದು ಅವುಗಳನ್ನು ನಿಪಿ 13 ಮತ್ತು

14 ಎಂದು ಗುರುತಿಸಲಾಯಿತು. ಆದ ಕಾರಣ ದಾವೆಯಲ್ಲಿ ಕೋರಿದ ಹಾಗೆ ಡಿಕ್ರಿಯಾಗ ಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ.ದಯಾನಂದ ಮೂರ್ತಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**